# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 141 (133) |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 14-02-2023 |
| ಉತ್ತರಿಸುವ ಸಚಿವರು | : | ಪೌರಾಡಳಿತ. ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸ್ವಚ್ಛ ಭಾರತ ಮಿಷನ್ (ನಗರ) ಯೋಜನೆಯಡಿ ಮಂಡ್ಯ ಮತ್ತು ಮದ್ದೂರು ನಗರ ಸ್ಥಳೀಯ ಸಂಸ್ಥೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ 2014 ರಿಂದ 2021 ರವರಗೆ ಬಿಡುಗಡೆಯಾದ ಅನುದಾನ ಎಷ್ಟು; ವೆಚ್ಚವಾದ ಅನುದಾನ ಎಷ್ಟು; ಕೇಂದ್ರದ ಹಾಗೂ ರಾಜ್ಯದ ಪಾಲೆಷ್ಟು; (ಮಾಹಿತಿ ನೀಡುವುದು). | ಸ್ವಚ್ಛ ಭಾರತ ಮಿಷನ್ (ನಗರ) ಯೋಜನೆಯಡಿ ಮಂಡ್ಯ ನಗರಸಭೆ ಮತ್ತು ಮದ್ದೂರು ಪುರಸಭೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ 2014 ರಿಂದ 2021 ರವರೆಗೆ ಬಿಡುಗಡೆಯಾದ ಮತ್ತು ವೆಚ್ಚವಾದ ಅನುದಾನದ ವಿವರ ಈ ಕೆಳಕಂಡಂತಿದೆ. |

**ನಗರಸಭೆ, ಮಂಡ್ಯ**

(ರೂ. ಲಕ್ಷಗಳು)

| ಕ್ರ. ಸಂ | ವರ್ಷ ವಾರು | ಕೇಂದ್ರ ಸರ್ಕಾರ | | ರಾಜ್ಯ ಸರ್ಕಾರ | |
|---|---|---|---|---|---|
| | | ಬಿಡುಗಡೆಯಾದ ಮೊತ್ತ | ವೆಚ್ಚವಾದ ಮೊತ್ತ | ಬಿಡುಗಡೆಯಾದ ಮೊತ್ತ | ವೆಚ್ಚವಾದ ಮೊತ್ತ |
| 1 | 2014-15 | - | - | - | - |
| 2 | 2015-16 | - | - | - | - |
| 3 | 2016-17 | 62.96 | 56.89 | 7.79 | 5.89 |
| 4 | 2017-18 | - | - | - | - |
| 5 | 2018-19 | 42.06 | 42.06 | 28.05 | 28.05 |
| 6 | 2019-20 | 102.00 | 102.00 | 68.00 | 68.00 |
| 7 | 2020-21 | 6.00 | 1.80 | 4.00 | 1.20 |
| 8 | 2021-22 | - | - | - | - |

**ಪುರಸಭೆ, ಮದ್ದೂರು**

(ರೂ. ಲಕ್ಷಗಳು)

| ಕ್ರ. ಸಂ | ವರ್ಷ ವಾರು | ಕೇಂದ್ರ ಸರ್ಕಾರ | | ರಾಜ್ಯ ಸರ್ಕಾರ | |
|---|---|---|---|---|---|
| | | ಬಿಡುಗಡೆಯಾದ ಮೊತ್ತ | ವೆಚ್ಚವಾದ ಮೊತ್ತ | ಬಿಡುಗಡೆಯಾದ ಮೊತ್ತ | ವೆಚ್ಚವಾದ ಮೊತ್ತ |
| 1 | 2014-15 | - | - | - | - |
| 2 | 2015-16 | 3.92 | 0.28 | 10.62 | 7.58 |
| 3 | 2016-17 | 2.94 | 2.46 | 5.02 | 3.70 |
| 4 | 2017-18 | - | - | - | - |
| 5 | 2018-19 | - | - | - | - |
| 6 | 2019-20 | 144.61 | 144.61 | 61.97 | 61.97 |
| 7 | 2020-21 | 2.50 | 0.42 | 2.50 | 0.42 |
| 8 | 2021-22 | - | - | - | - |

**ಆ** ಮಂಡ್ಯ ಮತ್ತು ಮದ್ದೂರು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 2014 ರಿಂದ 2021 ರವರೆಗೆ ನಿರ್ಮಿಸಿರುವ ಗೃಹ ಶೌಚಾಲಯ, ಸಮುದಾಯ ಶೌಚಾಲಯ, ಶಾಲಾ ಶೌಚಾಲಯ, ಅಂಗನವಾಡಿ ಶೌಚಾಲಯಗಳ ಸಂಖ್ಯೆ ಎಷ್ಟು;

ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಮಂಡ್ಯ ನಗರಸಭೆ ಮತ್ತು ಮದ್ದೂರು ಪುರಸಭೆ ವ್ಯಾಪ್ತಿಯಲ್ಲಿ 2014 ರಿಂದ 2021 ರವರೆಗೆ ನಿರ್ಮಿಸಿರುವ ಗೃಹ ಶೌಚಾಲಯ, ಸಮುದಾಯ ಶೌಚಾಲಯ, ಶಾಲಾ ಶೌಚಾಲಯ, ಅಂಗನವಾಡಿ ಶೌಚಾಲಯಗಳ ವಿವರ ಈ ಕೆಳಕಂಡಂತಿದೆ.

<u>ನಗರಸಭೆ, ಮಂಡ್ಯ</u>

| ಕ್ರ.ಸಂ | ವರ್ಷವಾರು | ಗೃಹ ಶೌಚಾಲಯ | ಸಮುದಾಯ ಶೌಚಾಲಯ | ಶಾಲಾ ಶೌಚಾಲಯ | ಅಂಗನವಾಡಿ ಶೌಚಾಲಯ |
|---|---|---|---|---|---|
| 1 | 2014-15 | - | 1 | - | - |
| 2 | 2015-16 | - | - | - | - |
| 3 | 2016-17 | 583 | - | - | - |
| 4 | 2017-18 | - | - | - | - |
| 5 | 2018-19 | - | - | - | - |
| 6 | 2019-20 | - | - | - | - |
| 7 | 2020-21 | - | - | - | - |
| 8 | 2021-22 | - | - | - | - |

<u>ಪುರಸಭೆ, ಮದ್ದೂರು</u>

| ಕ್ರ. ಸಂ | ವರ್ಷವಾರು | ಗೃಹ ಶೌಚಾಲಯ | ಸಮುದಾಯ ಶೌಚಾಲಯ | ಶಾಲಾ ಶೌಚಾಲಯ | ಅಂಗನವಾಡಿ ಶೌಚಾಲಯ |
|---|---|---|---|---|---|
| 1 | 2014-15 | - | 1 | - | - |
| 2 | 2015-16 | 24 | - | - | - |
| 3 | 2016-17 | 30 | - | - | - |
| 4 | 2017-18 | 38 | - | - | - |
| 5 | 2018-19 | 46 | - | - | - |
| 6 | 2019-20 | - | - | - | - |
| 7 | 2020-21 | - | - | - | - |
| 8 | 2021-22 | - | - | - | - |

**ಇ** ಸದರಿ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 2014 ರಿಂದ 2021 ರವರೆಗೆ ಗೃಹ ಶೌಚಾಲಯ ನಿರ್ಮಿಸಿಕೊಂಡ ಬಿಪಿಎಲ್/ ಎಸ್.ಸಿ/ ಎಸ್.ಟಿ/ ಇತರೆ ಕುಟುಂಬಗಳ ಸಂಖ್ಯೆ ಎಷ್ಟು; ಹಾಗೂ ಇವರಿಗೆ ಪಾವತಿಸಲಾದ ಪ್ರೋತ್ಸಾಹ ಧನದ ಮೊತ್ತ ಎಷ್ಟು; (ವರ್ಷವಾರು ಮಾಹಿತಿ ನೀಡುವುದು)

ಮಂಡ್ಯ ನಗರಸಭೆ ಮತ್ತು ಮದ್ದೂರು ಪುರಸಭೆ ವ್ಯಾಪ್ತಿಯಲ್ಲಿ 2014 ರಿಂದ 2021 ರವರೆಗೆ ಗೃಹ ಶೌಚಾಲಯ ನಿರ್ಮಿಸಿಕೊಂಡ ಬಿಪಿಎಲ್/ಎಸ್.ಸಿ/ಎಸ್.ಟಿ/ಇತರೆ ಕುಟುಂಬಗಳ ಸಂಖ್ಯೆ ಹಾಗೂ ಸದರಿರವರಿಗೆ ಪಾವತಿಸಲಾದ ಪ್ರೋತ್ಸಾಹ ಧನದ ಮೊತ್ತ ವಿವರ ಈ ಕೆಳಕಂಡಂತಿದೆ.

<u>ನಗರಸಭೆ, ಮಂಡ್ಯ</u>

(ರೂ. ಲಕ್ಷಗಳು)

| ಕ್ರ. ಸಂ | ವರ್ಷ ವಾರು | ಬಿಪಿಎಲ್ ಕುಟುಂಬ ಸಂಖ್ಯೆ | ಪ್ರೋತ್ಸಾಹ ಧನ | ಎಸ್.ಸಿ ಕುಟುಂಬ ಸಂಖ್ಯೆ | ಪ್ರೋತ್ಸಾಹ ಧನ | ಎಸ್.ಟಿ ಕುಟುಂಬ ಸಂಖ್ಯೆ | ಪ್ರೋತ್ಸಾಹ ಧನ | ಇತರೆ ಕುಟುಂಬ | ಪ್ರೋತ್ಸಾಹ ಧನ |
|---|---|---|---|---|---|---|---|---|---|
| 1 | 2014 | - | - | - | - | - | - | - | - |
| 2 | 2015 | - | - | - | - | - | - | - | - |
| 3 | 2016 | - | - | 268 | 14.29 | - | - | 315 | 16.80 |
| 4 | 2017 | - | - | - | - | - | - | - | - |
| 5 | 2018 | - | - | - | - | - | - | - | - |
| 6 | 2019 | - | - | - | - | - | - | - | - |
| 7 | 2020 | - | - | - | - | - | - | - | - |
| 8 | 2021 | - | - | - | - | - | - | - | - |

<u>ಪುರಸಭೆ, ಮದ್ದೂರು</u>

(ರೂ. ಲಕ್ಷಗಳು)

| ಕ್ರ. ಸಂ | ವರ್ಷ ವಾರು | ಬಿಪಿಎಲ್ ಕಾರ್ಡ್ ಕುಟುಂಬ ಸಂಖ್ಯೆ | ಪ್ರೋತ್ಸಾಹ ಧನ | ಎಸ್.ಸಿ ಕುಟುಂಬ ಸಂಖ್ಯೆ | ಪ್ರೋತ್ಸಾಹ ಧನ | ಎಸ್.ಟಿ ಕುಟುಂಬ ಸಂಖ್ಯೆ | ಪ್ರೋತ್ಸಾಹ ಧನ | ಇತರೆ ಕುಟುಂಬ | ಪ್ರೋತ್ಸಾಹ ಧನ |
|---|---|---|---|---|---|---|---|---|---|
| 1 | 2014 | - | - | - | - | - | - | - | - |

| | | | | | | | | | |
|---|---|---|---|---|---|---|---|---|---|
| 2 | 2015 | 24 | 1.95 | – | – | – | – | – | – |
| 3 | 2016 | 30 | 2.40 | – | – | – | – | – | – |
| 4 | 2017 | 38 | 3.00 | – | – | – | – | – | – |
| 5 | 2018 | 46 | 3.64 | – | – | – | – | – | – |
| 6 | 2019 | – | – | – | – | – | – | – | – |
| 7 | 2020 | – | – | – | – | – | – | – | – |
| 8 | 2021 | – | – | – | – | – | – | – | – |

| | | |
|---|---|---|
| ಈ | ಸದರಿ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸ್ವಚ್ಛತೆ ಮತ್ತು ನಗರ ನೈರ್ಮಲ್ಯ ಕೆಲಸಗಳಿಗೆ ಎಷ್ಟು ವಾಹನಗಳನ್ನು ಖರೀದಿಸಿ ಬಳಸಲಾಗುತ್ತಿದೆ; ಸ್ವಚ್ಛತಾ ಕೆಲಸಗಳಿಗಾಗಿ ಎಷ್ಟು ಮಂದಿ ಪೌರಕಾರ್ಮಿಕರನ್ನು ಬಳಸಿಕೊಳ್ಳಲಾಗುತ್ತಿದೆ; (ವಿವರ ನೀಡುವುದು) | <u>ಮಂಡ್ಯ ನಗರಸಭೆ:</u><br>ಮಂಡ್ಯ ನಗರಸಭೆ ವ್ಯಾಪ್ತಿಯ ಸ್ವಚ್ಛತೆ ಮತ್ತು ನಗರ ನೈರ್ಮಲ್ಯ ಕೆಲಸಗಳಿಗೆ ಒಟ್ಟು 44 ವಾಹನ-ಯಂತ್ರೋಪಕರಣಗಳನ್ನು (2-ಕಾಂಪ್ಯಾಕ್ಟರ್, 2-ಫ್ರಂಟ್ ಲೋಡರ್ ವಿತ್ ಬ್ಯಾಕ್‌ಹೋ (ಜೆಸಿಬಿ), 7-ಟ್ರ್ಯಾಕ್ಟರ್ ಟ್ರೈಲರ್, 1-ಟಿಪ್ಪರ್ ಟ್ರಕ್, 28-ಆಟೋಟಿಪ್ಪರ್‌ಗಳು, 2-ಸಕ್ಕಿಂಗ್ ಅಂಡ್ ಜೆಟ್ಟಿಂಗ್ ಮೆಷಿನ್, 1- ಡೀಸಿಲ್ಟಿಂಗ್ ಮೆಷಿನ್, 1-ಆಟೋ ಮೌಂಟೆಡ್ ಕೆಮಿಕಲ್ ಸ್ಪ್ರೇಯರ್) ಖರೀದಿಸಿ ಬಳಸಲಾಗುತ್ತಿದೆ; ಸ್ವಚ್ಛತಾ ಕೆಲಸಗಳಿಗಾಗಿ 230 ಮಂದಿ ಪೌರಕಾರ್ಮಿಕರನ್ನು ಬಳಸಿಕೊಳ್ಳಲಾಗುತ್ತಿದೆ.<br><br><u>ಮದ್ದೂರು ಪುರಸಭೆ</u><br>ಮದ್ದೂರು ಪುರಸಭೆ ವ್ಯಾಪ್ತಿಯ ಸ್ವಚ್ಛತೆ ಮತ್ತು ನಗರ ನೈರ್ಮಲ್ಯ ಕೆಲಸಗಳಿಗೆ ಒಟ್ಟು 12 ವಾಹನ-ಯಂತ್ರೋಪಕರಣಗಳನ್ನು (1-ಕಾಂಪ್ಯಾಕ್ಟರ್, 1-ಟ್ರ್ಯಾಕ್ಟರ್ ಟ್ರೈಲರ್, 1-ಲಾರಿ ಟಿಪ್ಪರ್, 7-ಆಟೋಟಿಪ್ಪರ್, 1-ಸಕ್ಕಿಂಗ್ ಅಂಡ್ ಜೆಟ್ಟಿಂಗ್ ಮೆಷಿನ್, 1- ಡೀಸಿಲ್ಟಿಂಗ್ ಮೆಷಿನ್) ಖರೀದಿಸಿ ಬಳಸಲಾಗುತ್ತಿದೆ; ಸ್ವಚ್ಛತಾ ಕೆಲಸಗಳಿಗಾಗಿ 42 ಮಂದಿ ಪೌರಕಾರ್ಮಿಕರನ್ನು ಬಳಸಿಕೊಳ್ಳಲಾಗುತ್ತಿದೆ. |
| ಉ | ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಗಾಗಿ ತೆಗೆದುಕೊಂಡಿರುವ ಕ್ರಮಗಳೇನು; ವಾರ್ಷಿಕ ಉತ್ಪತ್ತಿ ಆಗುತ್ತಿರುವ ಸರಾಸರಿ ತ್ಯಾಜ್ಯ ಪ್ರಮಾಣ ಎಷ್ಟು; (ವಿವರ ನೀಡುವುದು) | <u>ಮಂಡ್ಯ ನಗರಸಭೆ:</u><br><u>ಘನ ತ್ಯಾಜ್ಯ:</u><br>ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಅಂದಾಜು 60.00 ಟನ್ ಹಾಗೂ ವಾರ್ಷಿಕ ಅಂದಾಜು 21900 ಟನ್ ಘನ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಘನತ್ಯಾಜ್ಯವನ್ನು ಹಸಿ ಕಸ ಮತ್ತು ಒಣಕಸವೆಂದು ವಿಂಗಡಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತಿದೆ.<br><br>ಪ್ರತಿನಿತ್ಯ ಅಂದಾಜು 56 ಟನ್‌ನಷ್ಟು ಘನತ್ಯಾಜ್ಯವನ್ನು ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಖರೀದಿಸಲಾಗಿರುವ 40 ವಾಹನಗಳ ಸಹಾಯದಿಂದ ಕಸವನ್ನು ಸಂಗ್ರಹಿಸಿ ಕಾಳೇನಹಳ್ಳಿ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಾಗಿಸಿ ವಿಲೇ ಮಾಡಲಾಗುತ್ತಿದೆ. ಅಂದಾಜು 8 ಟನ್‌ನಷ್ಟು ಹಸಿಕಸವನ್ನು ಪಿಟ್ ವಿಧಾನ ಮತ್ತು ವಿಂಡ್‌ರೋ ವಿಧಾನದ ಮುಖಾಂತರ ಗೊಬ್ಬರವನ್ನಾಗಿಸಲಾಗುತ್ತದೆ. 2 ಟನ್‌ನಷ್ಟು ಒಣತ್ಯಾಜ್ಯವನ್ನು ರ್‍ಯಾಗ್ ಪಿಕ್ಕರ್ಸ್‌ಗಳು ವಿಂಗಡಿಸಿ, ಮಾರಾಟ ಮಾಡಿ, ಬರುವ ಆದಾಯವನ್ನು ಪ್ರೋತ್ಸಾಹ ಧನದ ರೂಪದಲ್ಲಿ ಬಳಸಿಕೊಳ್ಳುತ್ತಿದ್ದಾರೆ. ತ್ಯಾಜ್ಯ ವಿಲೇವಾರಿ ಘಟಕದಲ್ಲಿ ವಿಲೇವಾರಿಗೆ ಅವಶ್ಯಕವಿರುವ ಸಿವಿಲ್ ಕಾಮಗಾರಿಗಳನ್ನು ಮಾಡಲಾಗಿರುತ್ತದೆ, ಅಲ್ಲಿ ನಿರ್ಮಿಸಲಾಗುತ್ತಿರುವ ಸ್ಯಾನಿಟರಿ ಲ್ಯಾಂಡ್‌ಫಿಲ್ ಸೌಲಭ್ಯದಲ್ಲಿ ಬಾಕಿ ಉಳಿಯುವ ನಿರುಪಯುಕ್ತ ಕಸವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತದೆ. ಕಸ ವಿಲೇವಾರಿ ಘಟಕದಲ್ಲಿ ಸ್ಥಾಪಿಸಲಾಗುತ್ತಿರುವ ಟ್ರಾಮೆಲ್ ಸ್ಕ್ರೀನರ್ ಯಂತ್ರದಿಂದ ಒಣ ತ್ಯಾಜ್ಯ ವನ್ನು ಹಸಿತ್ಯಾಜ್ಯದಿಂದ ಬೇರ್ಪಡಿಸಿ, ಹಸಿತ್ಯಾಜ್ಯದಿಂದ ಗೊಬ್ಬರವನ್ನು ಉತ್ಪತ್ತಿ ಮಾಡಲಾಗುತ್ತದೆ.<br><br><u>ದ್ರವ ತ್ಯಾಜ್ಯ:</u><br>ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ಸರಾಸರಿ ಪ್ರತಿ ದಿನ 18 ಎಂ.ಎಲ್.ಡಿ ಹಾಗೂ ವಾರ್ಷಿಕ 6750 ಎಂ.ಎಲ್.ಡಿ ದ್ರವತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಮಂಡ್ಯ ನಗರಸಭೆಯಲ್ಲಿ 8.9 ಎಂ.ಎಲ್.ಡಿ ಮತ್ತು 9.52 ಎಂ.ಎಲ್.ಡಿ ಸಾಮರ್ಥ್ಯದ ಎರಡು ಕೊಳಚೆ ನೀರು ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಿದ್ದು ಕಾರ್ಯನಿರ್ವಹಿಸುತ್ತಿರುತ್ತವೆ. ಸದರಿ ಕೊಳಚೆ ನೀರು ಶುದ್ಧೀಕರಣ ಘಟಕದ ವ್ಯವಸ್ಥೆಯನ್ನು ನಗರಸಭೆ ವತಿಯಿಂದ ನಿರ್ವಹಣೆ ಮಾಡಲಾಗುತ್ತಿದೆ. |

| | | |
|---|---|---|
| | | **ಮದ್ದೂರು ಪುರಸಭೆ**<br>**ಘನ ತ್ಯಾಜ್ಯ:**<br><br>ಮದ್ದೂರು ಪುರಸಭಾ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಅಂದಾಜು 13.17 ಟನ್ ಹಾಗೂ ವಾರ್ಷಿಕ ಅಂದಾಜು 4807 ಟನ್‌ಗಳಷ್ಟು ಘನತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಘನತ್ಯಾಜ್ಯವನ್ನು ಹಸಿ ಕಸ ಮತ್ತು ಒಣಕಸವೆಂದು ವಿಂಗಡಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತಿದೆ. ಪ್ರತಿನಿತ್ಯ ಅಂದಾಜು 12 ಟನ್ ನಷ್ಟು ಘನತ್ಯಾಜ್ಯವನ್ನು ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಖರೀದಿಸಲಾಗಿರುವ 10 ವಾಹನಗಳ ಸಹಾಯದಿಂದ ಸಂಗ್ರಹಿಸಿ, ಹೂತಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ನೆಲಭರ್ತಿ ಜಾಗ ಮತ್ತು ಮದ್ದೂರು ಪಟ್ಟಣದಲ್ಲಿರುವ ಶಿವಪುರ ಕಸ ವಿಲೇವಾರಿ ಘಟಕಕ್ಕೆ ಸಾಗಿಸಿ, ಅಲ್ಲಿಯೇ ವಿಲೇವಾರಿ ಮಾಡಲಾಗುತ್ತಿದೆ. ಪ್ರತಿದಿನ 2 ಟನ್‌ನಷ್ಟು ಹಸಿಕಸವನ್ನು ಶಿವಪುರ ಕಸ ವಿಲೇವಾರಿ ಘಟಕದಲ್ಲಿ ಸಂಸ್ಕರಣೆ ಮಾಡಲಾಗುತ್ತಿದೆ. ಅಂದಾಜು 3 ಟನ್ ನಷ್ಟು ಹಸಿಕಸವನ್ನು ಹೋಂಕಾಂಪೋಸ್ಟಿಂಗ್ ಹಾಗು ಪಿಟ್ ಮೆಥಡ್ ಮುಖಾಂತರ ಗೊಬ್ಬರವನ್ನಾಗಿಸಲಾಗುತ್ತದೆ. 2 ಟನ್‌ನಷ್ಟು ಒಣತ್ಯಾಜ್ಯವನ್ನು ಪೌರಕಾರ್ಮಿಕರು ವಿಂಗಡಿಸಿ, ಮಾರಾಟ ಮಾಡಿ, ಬರುವ ಆದಾಯವನ್ನು ಪೌರಕಾರ್ಮಿಕರು ಹಾಲಿ ಪ್ರೋತ್ಸಾಹ ಧನದ ರೂಪದಲ್ಲಿ ಬಳಸಿಕೊಳ್ಳುತ್ತಿದ್ದಾರೆ. ಹೂತಗೆರೆ ಕಸ ವಿಲೇವಾರಿ ಘಟಕದಲ್ಲಿ ತ್ಯಾಜ್ಯ ವಿಲೇವಾರಿಗೆ ಅವಶ್ಯಕ ಸಿವಿಲ್ ಕಾಮಗಾರಿಗಳು ಮುಗಿಯುವ ಹಂತಕ್ಕೆ ಬಂದಿದ್ದು, ಅಲ್ಲಿ ನಿರ್ಮಿಸಲಾಗುತ್ತಿರುವ ಸ್ಯಾನಿಟರಿ ಲ್ಯಾಂಡ್‌ಫಿಲ್ ಸೌಲಭ್ಯದಲ್ಲಿ ಬಾಕಿ ಇರುವ ನಿರುಪಯುಕ್ತ ಕಸವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಕ್ರಮ ವಹಿಸಲಾಗುತ್ತದೆ. ಕಸ ವಿಲೇವಾರಿ ಘಟಕದಲ್ಲಿ ಸ್ಥಾಪಿಸಲಾಗುತ್ತಿರುವ ಟ್ರಾಮೆಲ್ ಸ್ಕ್ರೀನರ್ ಯಂತ್ರದಿಂದ ಒಣ ತ್ಯಾಜ್ಯ ಹಾಗು ಹಸಿತ್ಯಾಜ್ಯವನ್ನು ಬೇರ್ಪಡಿಸಿ, ಹಸಿತ್ಯಾಜ್ಯದಿಂದ ಗೊಬ್ಬರವನ್ನು ತಯಾರಿಸಿ ಪುರಸಭೆ ವತಿಯಿಂದ ಮಾರಾಟ ಮಾಡಲು ಯೋಜಿಸಲಾಗಿರುತ್ತದೆ.<br><br>**ದ್ರವ ತ್ಯಾಜ್ಯ:**<br>ಮದ್ದೂರು ಪುರಸಭೆ ವ್ಯಾಪ್ತಿಯಲ್ಲಿ ಈ ಹಿಂದೆ ಇದ್ದ 3.5 ಎಂ.ಎಲ್.ಡಿ ಸಾಮರ್ಥ್ಯದ ಕೊಳಚೆ ನೀರು ಶುದ್ಧೀಕರಣ ಘಟಕವನ್ನು ರೂ.55 ಕೋಟಿಗಳ ವೆಚ್ಚದಲ್ಲಿ ಉನ್ನತೀಕರಣ ಮಾಡಿ ಯು.ಜಿ.ಡಿ ಸಂಪರ್ಕವಿರುವ ಪ್ರದೇಶಗಳಿಗೆ ಪೈಪ್‌ಲೈನ್ ನಿರ್ಮಾಣ ಮಾಡಿ ಸಂಪೂರ್ಣ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ಮೇಲ್ದಟ್ಟಕ್ಕೆ ಏರಿಸಲಾಗಿದೆ. ಸದರಿ ಕೊಳಚೆ ನೀರು ಶುದ್ಧೀಕರಣ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆಯ ಕಾರ್ಯವನ್ನು 5 ವರ್ಷದ ಅವಧಿಗೆ ಖಾಸಗಿಯವರಿಗೆ ವಹಿಸಲಾಗಿದೆ. |
| ಊ | ಸಂಗ್ರಹಿಸಲಾದ ತ್ಯಾಜ್ಯದಿಂದ ಗೊಬ್ಬರ ತಯಾರಿಸಿ ಮಾರಾಟ ಮಾಡಲಾಗುತ್ತಿದೆಯೇ? (ಹಾಗಿದ್ದಲ್ಲಿ ವಿವರಣೆ ನೀಡುವುದು) | **ಮಂಡ್ಯ ನಗರಸಭೆ:**<br>**ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ** ಪ್ರತಿದಿನ 8 ಟನ್‌ನಷ್ಟು ಹಸಿಕಸವನ್ನು ಕಾಳೇನಹಳ್ಳಿ ಕಸ ವಿಲೇವಾರಿ ಘಟಕದಲ್ಲಿ ಗೊಬ್ಬರ ಮಾಡಲಾಗುತ್ತಿದೆ. ಹಸಿಕಸದಿಂದ ಪಿಟ್ ವಿಧಾನ ಮತ್ತು ವಿಂಡ್‌ರೋ ವಿಧಾನದ ಮುಖಾಂತರ ಅಂದಾಜು 1.00 ಟನ್‌ನಷ್ಟು ಗೊಬ್ಬರವನ್ನಾಗಿಸಲಾಗುತ್ತಿದೆ. ನಗರಸಭೆಯಿಂದ ರೂ. 3000.00 ಗಳಿಗೆ ಮಾರಾಟ ಮಾಡಲಾಗಿದೆ ಉಳಿದ ಗೊಬ್ಬರವನ್ನು ಸಂಗ್ರಹಿಸಿದ್ದು ಮಾರಾಟ ಮಾಡಲು ಕ್ರಮ ವಹಿಸಲಾಗುವುದು.<br><br>**ಮದ್ದೂರು ಪುರಸಭೆ:**<br>**ಮದ್ದೂರು ಪುರಸಭೆ ವ್ಯಾಪ್ತಿಯಲ್ಲಿ** ಪ್ರತಿದಿನ 2 ಟನ್‌ನಷ್ಟು ಹಸಿಕಸವನ್ನು ಶಿವಪುರ ಕಸ ವಿಲೇವಾರಿ ಘಟಕದಲ್ಲಿ ಸಂಸ್ಕರಣೆ ಮಾಡಲಾಗುತ್ತಿದೆ. ಅಂದಾಜು 3 ಟನ್ ನಷ್ಟು ಹಸಿಕಸವನ್ನು ಹೋಂಕಾಂಪೋಸ್ಟಿಂಗ್ ಹಾಗೂ ಪಿಟ್ ವಿಧಾನದ ಮುಖಾಂತರ ಗೊಬ್ಬರವನ್ನಾಗಿಸಲಾಗುತ್ತಿದೆ. ಇದನ್ನು ಮದ್ದೂರು ಪುರಸಭೆ ವ್ಯಾಪ್ತಿಯಲ್ಲಿರುವ ಉದ್ಯಾನವನಗಳಲ್ಲಿ ಬಳಸಲಾಗುತ್ತಿದೆ. |

ಸಂ: ನಅಇ 23 ಸಿಎಸ್‌ಎಸ್ 2023

(ಎನ್. ನಾಗರಾಜ (ಎಂಟಿಬಿ))
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು